ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದ ಸುವರ್ಣ ಚೆಳ್ಳೂರು ಕನ್ನಡ ಸಾಹಿತ್ಯದತ್ತ ಒಲವು ಹೊಂದಿದವರು. ಪ್ರಸ್ತುತ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿನಿ. ಕಥೆಗಳನ್ನು ಬರೆಯುತ್ತ ಬಹುಮಾನಗಳನ್ನು ಗಳಿಸುತ್ತ ನಿರಂತರ ಓದಿಗೆ ತೆರೆದುಕೊಂಡವರು. ಜೊತೆಗೆ ಫೋಟೊಗ್ರಫಿಯ ಹವ್ಯಾಸವನ್ನು ಹಚ್ಚಿಕೊಂಡಿದ್ದಾರೆ. ಕೊಪ್ಪಳ ಜಿಲ್ಲೆಯ ಕಾರಟಗಿ ತಾಲ್ಲೂಕಿನ ಚೆಳ್ಳೂರು ಅವರ ಹುಟ್ಟೂರು.

ಸಪ್ತಾಪುರ, ಕಲ್ಯಾಣನಗರಕಡೆ ಇವಾಗ ಸಿಗೂದಂತೂ ಕಷ್ಟ ಅದ. ಆ ಯೂನಿವರ್ಸಿಟಿ ಕಡೆ ನೋಡ್ರಲಾ ಸಿಕ್ರು ಸಿಗಬಹುದು ಅಂದಾಗ' ರೂಮ್ ಹುಡುಕುವ ಕೆಲಸ ಶುರುವಿಟ್ಟುಕೊಂಡ. ಹಾದಿ ಹಿಡಿದು ರೂಮ್ ಹುಡುಕುತ್ತಾ ಹೋದವನಿಗೆ ರೂಮ್ ಬಾಡಿಗೆ ಹೇಗೆ ಕೇಳೊದು ಅಂತ ಚಿಂತೆಯಾಯ್ತು. ಕೊನೆಗೂ ಧೈರ್ಯ ಮಾಡಿ ಅಲ್ಲಲ್ಲಿ ಇದ್ದ ರೂಮ್ ರೆಂಟ್ ಬೋರ್ಡ್ ಇರುವ ಮನೆಗಳಿಗೆ ಹೋಗಿ ಕೇಳಿದ. ಯಾವ ಜಾತಿ? ನಾನ್ ವೆಜ್ ಮಾಡೊ ಹಾಗಿಲ್ಲ, ಅನ್ನೊ ಮಾತುಗಳು ಕಸಿವಿಸಿ ಅನ್ನಿಸಿದ್ವು. ಅಂದುಕೊಂಡಷ್ಟು ಬಾಡಿಗೆಗೆ ರೂಮ್ ಸಿಗೋದು ಕಷ್ಟ ಎನಿಸಿತು, ಹುಡುಕುತ್ತಾ ಸಂಜೆ ಆಗಿತ್ತು ಚಪ್ಪಲಿಗಳಿಗೆ ಕೆಂಪು ಧೂಳು ಮೆತ್ತಿಕೊಂಡು ಅವು ಕೆಂಪಗಾಗಿದ್ದವು. ಹೊಟ್ಟೆ ಹಸಿವಾಗಿ ಮೈಯಲ್ಲಿನ ಶಕ್ತಿ ಕುಗ್ಗಿದಂತಾದಾಗ ಅಂಗಡಿಯಲ್ಲಿ ಎರಡು ಬಾಳೆಹಣ್ಣು ಕೊಂಡವನೆ ತಿಂದು ಮುಗಿಸಿದ. ಹೊಟ್ಟೆ ನಿರಾಳವೆನಿಸಿ ರೋಡಿನ ಪಕ್ಕದ ಪೂಲ್ ಮೇಲೆ ಕುಳಿತ. ರೋಡಿನ ಧೂಳು, ರಸ್ತೆ, ಅಪರಿಚಿತ ಮುಖಗಳು, ಗುರುತಿಲ್ಲದ ಮನೆಯ ಭಾಗವನ್ನ ಹುಡುಕುವ ಈ ಅಲೆದಾಟ, ಊರಲ್ಲಿನ ಅವ್ವ ಅಪ್ಪ, ಅವರ ಕಾಳಜಿ ಎಲ್ಲವೂ ಒಂದೆ ಸಮನೆ ಚಿತ್ರಗಳಂತೆ ಮುಂದೆ ಸರಿಯುತ್ತಾ ಹೋದವು. ಆದರೂ ಬಂದ ಉದ್ದೇಶ ಮರಿಬಾರದು ಅಂದುಕೊಂಡವನೆ ಮತ್ತೆ ರೂಮ್ ಹುಡುಕತೊಡಗಿದ. ಕೊನೆಗೂ ಅಂದುಕೊಂಡಂತ ರೆಂಟ್‌ಗೆ ಪುಟ್ಟ ರೂಮ್ ಸಿಕ್ಕಾಗ ಖುಷಿಯಾಗಿದ್ದ. ಈಗಿರುವ ರೂಮ್‌ನ ಸುತ್ತ ಅಂತ ದೊಡ್ಡ ದೊಡ್ಡ ಮನೆಗಳಿರಲಿಲ್ಲ, ಒಂದು ಕ್ಷಣಕ್ಕೆ ಹಳ್ಳಿಯೆನೋ ಅನ್ನಿಸುವಷ್ಟು ಹಿಂದುಳಿದಿತ್ತು.



ದಿನಬೆಳಗಾದರೆ ಕಾರ್ಪೊರೇಷನ್‌ಗೆ ಕ್ಲೀನಿಂಗ್ ಕೆಲಸಕ್ಕೆ ಹೋಗುವವರು, ಬೇರೆ ಮನೆಗೆ ಕೆಲಸಕ್ಕೆಂದು ಹೋಗುವ ಹೆಣ್ಣುಮಕ್ಕಳು, ದನದ ಹಿಂಡನ್ನ ಮೇಯಿಸಲು ಹೋಗುವವರು, ನೀಲಿ ಅಂಗಿ ತೊಟ್ಟ ಸರಕಾರಿ ಶಾಲೆ ಮಕ್ಕಳು. ಇದು ಇಲ್ಲಿ ಪ್ರತಿದಿನ ಕಣ್ಣಿಗೆ ಸಿಗುತ್ತಿದ್ದ ಬದುಕಾಗಿತ್ತು. ಹೂ ಅರಳಿಸಿ ನಿಂತ ಗುಲ್ ಮೊಹರ್, ಕೆಂಪು ಹಳದಿ ಹೂ ಚೆಲ್ಲಿರುವ ಹಾದಿಗಳು, ಮಳೆಬಂದು ನಿಂತ ಮೇಲೂ ಮಳೆ ಸುರಿಸುವ ದೊಡ್ಡ ಗಿಡಗಳು ಇಲ್ಲಿರಲಿಲ್ಲ, ಬದಲಿಗೆ ದಿನದ ಊಟಕ್ಕೆ ದುಡಿಯುವ ಜೋಪಡಿಗಳು, ಕೊಳಚೆಯ ಪಕ್ಕದಲ್ಲೇ ಮನೆ ಮಾಡಿಕೊಂಡು, ಮನೆ ಮನೆ ಕೆಲಸ ಮಾಡಿ ಮಕ್ಕಳಲ್ಲಿ ತಮ್ಮ ಕನಸು ಬಿತ್ತುತ್ತಿದ್ದ ಅಪ್ಪ-ಅಮ್ಮಂದಿರು ಇರುವ ಪುಟ್ಟಪುಟ್ಟ ಮನೆಗಳಿದ್ದವು. ರಾಯಣ್ಣ ಇದ್ದ ಬಾಡಿಗೆ ಮನೆ ಜಾಕೀರ್ ಬಡೇಸಾಬ್ ಅವರದ್ದಾಗಿತ್ತು. ಟೇರೆಸ್ ಮೇಲೆ ಕಟ್ಟಿದ್ದ ಪುಟ್ಟ ರೂಮನ್ನೇ ಬಾಡಿಗೆಗೆ ಕೊಟ್ಟಿದ್ದರು, ಮನೆ ಮುಂದೆ ಗೀತಾ ಆಂಟಿಯ ಪುಟ್ಟ ಮನೆ ಮತ್ತು ಅವರ ಮನೆಯಲ್ಲಿ ನೇತುಹಾಕಿದ ಅವರ ಗಂಡನ ಪೋಟೊ ಕಾಣುತ್ತಿತ್ತು. ಮನೆಯ ಸುತ್ತಲೂ ತೆಲುಗು, ಹಿಂದಿ, ಮಾತನಾಡುವ ಜನಗಳೇ ಇದ್ದರು ಕನ್ನಡ ಮಾತಾಡಲು ಸಿಗುತ್ತಿದ್ದವರು ಗೀತಾ ಆಂಟಿ ಮತ್ತೆ ಮೂಲೆಮನೆಯಲ್ಲಿದ್ದ ಭಾರತಿ ಆಂಟಿ ಮನೆಯಲ್ಲಿ ಮಾತ್ರ. ಆದರೂ ಜಾಕೀರ್ ಅಂಕಲ್ ಹೆಂಡತಿ ಸಾರಾ ತೊದಲು ಕನ್ನಡದಲ್ಲಿ ನಗುತ್ತಾ ಮಾತಾಡುತ್ತಿದ್ದುದು ಖುಷಿ ಕೊಡುತ್ತಿತ್ತು. ಇಲ್ಲಿ ಜಾತಿ ಜನಾಂಗ ಎಲ್ಲ ಮೀರಿ ಅವರೆಲ್ಲರ ನಡುವೆ ಬೆಸೆದುಕೊಂಡಿದ್ದ ಬಂಧಗಳು